ಹೇಳುತ್ತಿದ್ದೇನೆ. ಈಗ ನಾನು ಹೇಳುವುದು ಕೇಳಿ. ಈಗ ಇಲ್ಲಿ ಕುಳಿತಿರತಕ್ಕಂಥವರು ಸನ್ಮಾನ್ಯ ಮಂತ್ರಿಗಳಲ್ಲ ನಾನು ಅರಿಕೆ ಮಾಡಿಕೊಳ್ಳುವುದು ಇಲ್ಲಿ ಕುಳಿತಿರತಕ್ಕಂಥವರು, ಅವರ ಸಬ್ಜೆಕ್ಟ್‌ಗಳು ಇವೆ. ಮತ್ತೆ ಸಬ್ಜೆಕ್ಟ್ ಆದಂತೆ ಶಾಸಕರುಗಳು ಎದ್ದು ಹೋಗುತ್ತಿದ್ದಾರೆ. ಮಂತ್ರಿಗಳು ಇಲ್ಲಿ ಇರಬೇಕೆಂದು ಹೇಳಿ ಚೀಟಿ ಕಳುಹಿಸುತ್ತಿದ್ದಾರೆ. ಅಂದಮೇಲೆ ಯಾರು ಮಾತನಾಡುತ್ತಾರೆ. ಅವರು ಕೂಡ ಎದ್ದು ಹೋಗಬಾರದು. ಸದನ ಮುಗಿಯುವವರೆಗೂ ಇಲ್ಲೇ ಇರಬೇಕು. ಮಾತನಾಡಿ ಮಾತನಾಡಿ ಎದ್ದು ಹೋದರೆ ಇಲ್ಲಿ ಯಾರ ಹತ್ತಿರ ಮಾತನಾಡುವುದು. ಯಾರಿಗೆ ಮಾತನಾಡುವುದು. ಅದರಿಂದ ಮಾತನಾಡತಕ್ಕಂಥವರು ಮಾತನಾಡಿ ಇಲ್ಲಿಯೇ ಕೂರಬೇಕು. ಯಾರೂ ಎದ್ದುಹೋಗಬಾರದು. ಮಂತ್ರಿಗಳು ಬೇಗ ತಮ್ಮ ಉತ್ತರವನ್ನು ಮುಗಿಸಿಬಿಡಿ.

ಶ್ರೀ ಪಿ. ಭೈರೇಗೌಡ : ಇದು ಸ್ವಾಗತವಾಗಿರುವ ವಿಚಾರವಾಗಿರುವುದರಿಂದ ಸರ್ವ ಪಕ್ಷದ ನಿಯೋಗವನ್ನು ಮಾನ್ಯ ಪ್ರಧಾನಮಂತ್ರಿಗಳ ಮಟ್ಟಿಗೆ ಮತ್ತು ವಾಣಿಜ್ಯ ಮಂತ್ರಿಗಳ ಹತ್ತಿರವೂ ಹೋಗಿ ಅವರಿಗೆ ಈ ವಿಚಾರವನ್ನು ಮನದಟ್ಟು ಮಾಡಿಕೊಡುವುದಕ್ಕೆ ಈ ರೀತಿಯಾಗಿ ಮುಕ್ತವಾಗಿ ಹೊರದೇಶದಿಂದ ತರಿಸುವುದಕ್ಕೆ ನಮ್ಮ ಸ್ಪಷ್ಟವಾದ ವಿರೋಧವನ್ನು ತೋರಿಸಬೇಕಾಗುತ್ತದೆ. ಆ ಕೆಲಸವನ್ನು ರಾಜ್ಯ ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಸಹಾ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಇನ್ನೊಂದು ವಿಚಾರವನ್ನು ಮಾನ್ಯ ಪುಟ್ಟಣ್ಣಯ್ಯನವರು ತಿಳಿಸಿದ್ದಾರೆ. ಮಾನ್ಸಾಂಟೊ ನನಗೆ ಗೊತ್ತಿರುವ ಹಾಗೆ ಕೇಂದ್ರಸರ್ಕಾರದ ಪರವಾನಗಿ ಇಲ್ಲದೆ ಎಲ್ಲೂ ಕೂಡ ಏನು ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಪರವಾನಗಿಯನ್ನು ಮತ್ತು ರಾಜ್ಯಸರ್ಕಾರಕ್ಕೆ ಕೂಡ ಆ ಪರವಾನಗಿ ಬಗ್ಗೆ ತಿಳಿಸಿ ಅವರು ಕೆಲವು ಪ್ರಯೋಗಗಳನ್ನು ಮಾಡುತ್ತಿದ್ದಾರೆಯೇ ವಿನಹಾ ರಾಜ್ಯ ಸರ್ಕಾರವನ್ನು ಕೇಂದ್ರ ಸರ್ಕಾರವನ್ನು ಕತ್ತಲಲ್ಲಿ ಇಟ್ಟು ನನ್ನ ಮಾಹಿತಿ ಪ್ರಕಾರ ಯಾವ ಒಂದು ಪ್ರಯೋಗಗಳನ್ನು ಕೂಡ ಮಾಡುತ್ತಿಲ್ಲ ಎನ್ನುವುದನ್ನು ಮಾನ್ಯ ಪುಟ್ಟಣ್ಣಯ್ಯನವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

(ಎ) ಗೊರೂರಿನಲ್ಲಿರತಕ್ಕಂಥ ಹೇಮಾವತಿ ಜಲಾಶಯದ ಯೋಜನೆಯ ಗುತ್ತಿಗೆದಾರರಿಗೆ ಎಲ್.ಓ.ಸಿ.

ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಗೊರೂರಿನಲ್ಲಿರತಕ್ಕಂಥ ಹೇಮಾವತಿ ಜಲಾಶಯದ ಯೋಜನೆಯ ವ್ಯಾಪ್ತಿಯಲ್ಲಿ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುವಲ್ಲಿ ಯಾವುದೇ ನಿಯಮಗಳನ್ನು ಸರ್ಕಾರ ಮತ್ತು ನೀರಾವರಿ ಇಲಾಖೆ ಅನುಸರಿಸುತ್ತಿಲ್ಲ. ಮನಬಂದಂತೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡುತ್ತಾ ಅವರು ಇದ್ದಾರೆ, ಇದರಿಂದ ಗುತ್ತಿಗೆದಾರರಿಗೆ ಬಹಳ ತೊಂದರೆಯಾಗಿದೆ ಎನ್ನುವ ವಿಷಯವನ್ನು ನಾನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಈಗ ಸರ್ಕಾರ ಒಂದು ಸಾರಿ ಎಲ್.ಓ.ಸಿ. ಯನ್ನು ಕೊಟ್ಟಮೇಲೆ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲಿಕ್ಕೆ ನಿಯಮವನ್ನು, ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಆದರೆ ಈ ಇಲಾಖೆ ಗೊರೂರಿನಲ್ಲಿ ಕನಿಷ್ಟ ನಿಯಮ, ಗರಿಷ್ಠ ಬೇಡ. ಕನಿಷ್ಟ ನಿಯಮವನ್ನು ಕೂಡ ಅನುಸರಿಸುತ್ತಿಲ್ಲ. ಮೊನ್ನೆ 30-31 ನೇ ತಾರೀಖಿಗೆ ಬಿಲ್ ತಂದವರಿಗೆ ಹಣವನ್ನು ಪಾವತಿ ಮಾಡಿದ್ದಾರೆ. ಒಂದು ವರ್ಷದಿಂದ ಕೆಲಸ ಮಾಡಿ ಬಿಲ್ ಮಾಡಿಸಿಕೊಟ್ಟವರಿಗೆ ಹಣ ಪಾವತಿ ಮಾಡುತ್ತಿಲ್ಲ. ಹಣ ಕೊಟ್ಟವರಿಗೆ, ಚೀಟಿ

ತೆಗೆದುಕೊಂಡು ಹೋಗಿ ಕೊಟ್ಟವರಿಗೆ ಬಿಲ್ ಪಾವತಿ ಮಾಡುತ್ತಿರುವಂಥದ್ದು ಮತ್ತೆ ಈ ದಿಕ್ಕಿನಲ್ಲಿ ಪೂರ್ಣ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವ ವಿಷಯವನ್ನು ನಾನು ಈ ಸಂದರ್ಭದಲ್ಲಿ ತಮ್ಮೂಲಕ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತಾವು ಇಲ್ಲಿ ಕುಳಿತಿದ್ದರೆ ತಾವು ಕೂಡ ಈ ವಿಷಯದ ಬಗ್ಗೆ ಮಾತನಾಡುತ್ತಿದ್ದರೋ ಏನೋ ತಮಗೆ ನನ್ನಷ್ಟೇ ಅನುಭವವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಾರಿ ಕೂಡ ಎಲ್.ಓ.ಸಿ. ಯನ್ನು ಮಾನ್ಯ ಸಚಿವರು ಕಳುಹಿಸಿದ್ದಿರಿ. 31 ನೇ ತಾರೀಖಿಗೆ ಹೋದರೆ 1ನೇ ತಾರೀಖು ನೀವು ನಮ್ಮ ಜಿಲ್ಲಾ ಸಚಿವರಿಗೆ ಎಲ್.ಓ.ಸಿ. ಹಂಚಲಿಕ್ಕೆ ಅಧಿಕಾರವನ್ನು ಕೊಟ್ಟಿದ್ದೀರಾ? 1 ನೇ ತಾರೀಖಿಗೆ ಹೋಗಿ ಅವರು ಕುಳಿತುಕೊಂಡು ಹೋಗಿ ಹಂಚುತ್ತಾರೆ. ಈ ಸದನದಲ್ಲಿ ವಿಧೇಯಕ ಇತ್ತು. ವಿಧೇಯಕ ಮಂಡಿಸಲಿಕ್ಕೆ ಅವರು ಇಲ್ಲ. ನಮ್ಮ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಅಲ್ಲಿ ಹೋಗಿ ಎಲ್.ಓ.ಸಿ. ಹಂಚುತ್ತಾ ಕುಳಿತಿದ್ದರು. ಅವರಿಗೆ, ನೀವು ಅಧಿಕಾರವನ್ನು ಕೊಟ್ಟಿದ್ದೀರಾ? ಇದಕ್ಕೆ ಸರ್ಕಾರ ಇರಬೇಕಾ? ಮಂತ್ರಿಗಳು ಇರಬೇಕಾ? ಕನಿಷ್ಟ ನಿಯಮವನ್ನು ಕೂಡ ನೀವು ಅನುಸರಿಸಲಿಕ್ಕೆ ಆಗದೇ ಇದ್ದರೆ ನೀವು ಮಂತ್ರಿಯಾಗಿರಲಿಕ್ಕೆ ನನಗನಿಸುತ್ತದೆ ಶೋಭೆಯಲ್ಲ ನೀವು ರಾಜೀನಾಮೆ ಕೊಟ್ಟು ಹೋಗಬೇಕು. ಈ ರೀತಿ ನಿಯಮಗಳನ್ನು ಉಲ್ಲಂಘನೆ ಮಾಡಿ ಬಹಳ ಗುತ್ತಿಗೆದಾರರಿಗೆ ತೊಂದರೆ ಕೊಡುತ್ತಿದ್ದಾರಲ್ಲ, ಇದರ ಬಗ್ಗೆ ನೀವೇನು ಮಾಡುತ್ತಿದ್ದೀರಿ? ಏನು ಕ್ರಮ ಕೈಗೊಳ್ಳುತ್ತಿದ್ದೀರಿ?

7.20 ಪಿ. ಎಂ.

ಶ್ರೀ. ಸಿ. ಆರ್. ಸಗೀರ್ ಅಹಮದ್ : ಮಾನ್ಯ ರಾಮಸ್ವಾಮಿ ಅವರು ಹೇಳಿದ ತಕ್ಷಣ ರಾಜೀನಾಮೆ ಕೊಟ್ಟು ಬಿಡುತ್ತಾರಾ?

ಶ್ರೀ ಎ. ಟಿ. ರಾಮಸ್ವಾಮಿ : ಕನಿಷ್ಟ ನಿಯಮವನ್ನೂ ಅನುಸರಿಸುತ್ತಿಲ್ಲ. ಕನಿಷ್ಟ ಕ್ರಮಗಳನ್ನೂ ಅನುಸರಿಸದೇ ಎಲ್. ಓ. ಸಿ. ಇಷ್ಯೂ ಮಾಡುತ್ತಾರೆ. ಬಿಲ್ ಪಾವತಿ ಮಾಡುತ್ತಿದ್ದಾರೆ. ನೀವು ಅಲ್ಲಿ ಕುಳಿತಿರುವುದು ಸಂತೋಷ. ನೀವು ಛೀಮಾರಿ ಹಾಕಬೇಕು. ಇಲ್ಲ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಟ್ಟು ಹೋಗಿ. ಇಲ್ಲ ಅದನ್ನು ಸರಿ ಪಡಿಸತಕ್ಕ ಕ್ರಮವಾದರೂ ಮಾಡಿ. ಏನು ಮಾಡುತ್ತೀರಿ ಹೇಳಿ?

ಶ್ರೀ ಸಿ. ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನನಗೂ ಇದರ ಮಧ್ಯೆ ಮಾತನಾಡಲು ಅವಕಾಶವನ್ನು ಕೊಡಬೇಕಾಗುತ್ತದೆ.

ಛೇರ್ಮನ್ : ಇಲ್ಲ, ನಿಮಗೆ ಅವಕಾಶ ಇಲ್ಲ.

ಶ್ರೀ ಸಿ. ಆರ್. ಸಗೀರ್ ಅಹಮದ್ : ನನ್ನ ಕ್ಷೇತ್ರದಲ್ಲೂ ಸಹ ಹಣ ಪಾವತಿ ಮಾಡದೇ ಇರುವುದರಿಂದ ಲೋಕೋಪಯೋಗಿ ಇಲಾಖೆಯ ಕಛೇರಿಗೆ ಗುತ್ತಿಗೆದಾರರು ಬೀಗವನ್ನು ಹಾಕಿದ್ದಾರೆ.

ಛೇರ್ಮನ್ : ಇವರು ಹೇಮಾವತಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದಾರೆ. ತಾವು ಕುಳಿತುಕೊಳ್ಳಿ. ಮಾನ್ಯ ರಾಮಸ್ವಾಮಿಯವರು ಏನು ಹೇಳಿದ್ದಾರೆ, ಅದೇ ವಿಚಾರವನ್ನು ನಾನು ಸಹ ಹೇಳುತ್ತೇನೆ. ನಾನು ಈ ಸ್ಥಾನದಿಂದ ಕುಳಿತು ಹೇಳುತ್ತೇನೆ. ಎಲ್ಓಸಿ ಹಂಚುವಂತಹ ನೀತಿ ನಿಯಮ ಸರಿ ಇಲ್ಲ. ನಾನು ಮೊನ್ನೆ ಕೂಡ ಒಂದು ಸಾರಿ ಪ್ರಸ್ತಾಪ ಮಾಡಿದ್ದೆ. ಹೇಮಾವತಿ ಆ ಭಾಗದಲ್ಲಿ ಯಾವುದೇ

ಕೆಲಸ ಹೇಮಾವತಿಯ ಕಛೇರಿಯಲ್ಲಿ ನಡೆಯುವುದಿಲ್ಲ, ಎಲ್ಲವೂ ಹೊರಗಡೆ ನಡೆಯುತ್ತದೆ. ಅದರ ಬಗ್ಗೆ ತಾವು ಗಮನಹರಿಸಬೇಕು. ಇವತ್ತು ಎಲ್‌ಓಸಿಯನ್ನು ಎಲ್ಲೋ ಕುಳಿತುಕೊಂಡು ಹಂಚುವುದಾದರೆ ಕಂಟ್ರಾಕ್ಟರ್‌ಗಳು ಬರುವುದಿಲ್ಲ. ನಾವು ಕಷ್ಟಪಟ್ಟು ಕಂಟ್ರಾಕ್ಟರ್‌ಗಳನ್ನು ಕರೆದುಕೊಂಡು ಬಂದು ಅಲ್ಲಿ ನಿಲ್ಲಿಸಿದರೆ ಅವರು ನಿಲ್ಲುವುದಿಲ್ಲ. ಒಂದು ವರ್ಷ, ಎರಡು ವರ್ಷದಿಂದ ಬಿಲ್ ಬಾಕಿ ಇದೆ. ಎರಡು ತಿಂಗಳು, ಮೂರು ತಿಂಗಳು ಅವನಿಗೆ ಬಿಲ್ ಪಾವತಿ ಆಗುತ್ತದೆ ಎನ್ನುವುದಾದರೆ ಯಾವ ರೀತಿ ಕೆಲಸ ಮಾಡುವುದು ಅಲ್ಲಿ. ದಯವಿಟ್ಟು ತಾವು ಅದರ ಬಗ್ಗೆ ಸರಿಯಾದಂತಹ ನಿಲುವು ತೆಗೆದುಕೊಂಡು ಅವರಿಗೆ ಆದೇಶ ಕೊಡಬೇಕು. ಮತ್ತೆ ಮೊನ್ನೆ ಹೋಗಿರತಕ್ಕಂಥ ಎಲ್‌ಓಸಿ ಏನು ಇದೆ, ಅದರ ಲಿಸ್ಟ್ ತರಿಸಿ ಯಾರಿಗೆ ಪೇಮೆಂಟ್ ಮಾಡಿದ್ದಾರೆ ಎನ್ನುವುದನ್ನು ತಾವು ನೋಡಬೇಕು. ಅದನ್ನು ತಡೆ ಹಿಡಿದು ಹಿಂದೆ ಒಂದು ವರ್ಷ, ಒಂದೂವರೆ ವರ್ಷ ಯಾರಿಗೆ ಪೇಮೆಂಟ್ ಬಾಕಿ ಇದೆ, ಅವರಿಗೆ ಮೊದಲು ಪೇಮೆಂಟ್ ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿ ಅವರು ಗೊರೂರ್‌ನಲ್ಲಿ ಹೇಮಾವತಿ ಸರ್ಕಲ್‌ನಲ್ಲಿ ಗುತ್ತಿಗೆದಾರರಿಗೆ ಸರಿಯಾಗಿ ಹಣವನ್ನು ಪಾವತಿ ಮಾಡುತ್ತಿಲ್ಲ, ನಿಯಮಗಳು ಇಲ್ಲ. ಕನಿಷ್ಟ ನಿಯಮಗಳೂ ಕೂಡ ಇಲ್ಲ ಎಂದು ಹೇಳಿದ್ದಾರೆ. ನಿಯಮಗಳನ್ನು ಅನುಸರಿಸದೇ ಮನ ಬಂದಂತೆ ಹಂಚುತ್ತಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ಒಂದು ನಿಯಮವನ್ನು ಮಾಡಿದ್ದೇವೆ. ಇಲಾಖೆಯಲ್ಲಿ ನಿಯಮ ಇಲ್ಲ ಎಂದು ಹೇಳಲಿಕ್ಕೆ ಬರುವುದಿಲ್ಲ. ಆ ಇಲಾಖೆ ನಿಯಮ ಏನು ಅಂದರೆ ಸೀನಿಯಾರಿಟಿ ಮೇಲೆ ಕೊಡಬೇಕು ಎಂದು ನಿಯಮ. ಸೀನಿಯಾರಿಟಿಗೆ ಬಿಲ್ ಆದ ತಕ್ಷಣ ಡಿವಿಜನ್‌ನಲ್ಲಿ ಅದಕ್ಕೆ ನಂಬರ್ ಇರುತ್ತದೆ. ಸಬ್‌ಡಿವಿಜನ್‌ನಲ್ಲಿ ನಂಬರ್ ಇರುತ್ತದೆ. ಅದರ ಆಧಾರ ಇಟ್ಟುಕೊಂಡು ಮಾತ್ರ ಕೊಡಬೇಕು ಎಂಬ ನಿಯಮವನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇವೆ. ಜೊತೆಗೆ ಎಲ್‌ಓಸಿ ಕೊಡತಕ್ಕದ್ದನ್ನು ನಾವು ಈಗಾಗಲೇ ಆರ್ಥಿಕ ಇಲಾಖೆಯವರಿಗೆ ಬಿಟ್ಟು ಕೊಟ್ಟಿದ್ದೇವೆ. ಸುಮಾರು ಎರಡೂವರೆ ವರ್ಷದಿಂದ ಚೀಫ್ ಇಂಜಿನಿಯರ್‌ಗೆ ಎಲ್‌ಓಸಿ ನಾವು ಕೊಡುತ್ತಿಲ್ಲ. ಆರ್ಥಿಕ ಇಲಾಖೆಯವರು ನೇರವಾಗಿ ನಮ್ಮ ಚೀಫ್ ಇಂಜಿನಿಯರ್‌ಗೆ ಇವತ್ತು ಎಲ್‌ಓಸಿ ಬಿಡುಗಡೆ ಮಾಡುತ್ತಿದ್ದಾರೆ. ನಾವೂ ಹಣಕಾಸು ಇಲಾಖೆಯವರೂ ಮಾತನಾಡಿಕೊಂಡು ಒಂದು ಶಿಸ್ತು ಇರಲಿ ಎನ್ನತಕ್ಕ ದೃಷ್ಟಿಯಿಂದ ನೀರಾವರಿ ಇಲಾಖೆಯವರು ಕೊಡಬಾರದು. ಎಲ್‌ಓಸಿ ಕೊಡತಕ್ಕದ್ದನ್ನು ಆರ್ಥಿಕ ಇಲಾಖೆಯವರು ಕೊಡಬೇಕು. ನಿಯಮಗಳನ್ನು ಮಾತ್ರ ನೀರಾವರಿ ಇಲಾಖೆಯವರು ಹಾಕಬೇಕೆಂದು ಮಾಡಿದ್ದೇವೆ. ನನಗೆ ಗೊತ್ತಿರುವ ಹಾಗೆ ಎಲ್ಲಾ ಕಡೆಗೆ ಚೆನ್ನಾಗಿ ನಡೆಯುತ್ತಿದೆ ಎನ್ನತಕ್ಕದ್ದು ನಮ್ಮ ಮನಸ್ಸಿಗೆ ಬಂದಿರುವುದು. ಮಾನ್ಯ ರಾಮಸ್ವಾಮಿಯವರಿಗೆ ಹೇಳಿದರೆ ಇಲ್ಲ ನಮ್ಮಲ್ಲಿ ಆಗುತ್ತಿಲ್ಲ ಎಂದರು. ಅವರು ನಿರ್ದಿಷ್ಟವಾಗಿ ಯಾವ ಸಬ್ ಡಿವಿಜನ್‌ನಲ್ಲಿ , ಯಾವ ಡಿವಿಜನ್‌ನಲ್ಲಿ ಯಾವ ಸೀನಿಯಾರಿಟಿ ನಂಬರ್ ಅನ್ನು ಓವರ್‌ಲುಕ್ ಮಾಡಿದ್ದಾರೆ ? ಈಗ ಅವರು ಜಿಲ್ಲಾ ಮಂತ್ರಿಗಳು ನೇರವಾಗಿ ಎಲ್‌ಓಸಿ ಹಂಚುತ್ತಿದ್ದಾರೆ ಎನ್ನುವಂತಹ ಮಾತನ್ನು ಹೇಳಿದ್ದಾರೆ. ಅದಕ್ಕೆ ನಿರ್ದಿಷ್ಟವಾಗಿ ಇಂತಹ ಪ್ರಕರಣ ಎಂದು ಕೊಟ್ಟರೆ ಯಾವ ಅಧಿಕಾರಿ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಾನೆ, ಒಂದೇ ನಿಮಿಷದಲ್ಲಿ ಸಸ್ಪೆಂಡ್ ಮಾಡುತ್ತೇನೆ. ಆದ್ದರಿಂದ ಅವರು ಕೆಲವು ಹೇಳಿದ

ಹಾಗೆ ಕೆಲವು ಎಕ್ಸಂಪ್ಷನ್ ಏನು ಮಾಡಿದ್ದೇವೆಂದರೆ 10 ಪರ್ಸೆಂಟ್ ಮಾತ್ರ. ನಾವು ಕೊಟ್ಟಿರತಕ್ಕ ನಿಯಮದಲ್ಲಿ ಹತ್ತು ಪರ್ಸೆಂಟ್ ಮಾತ್ರ ಮಾಡಿದ್ದೇವೆ. ಯಾರೋ ಕೆಲವರು ತೀರಾ ಬಡವರು ಇರುತ್ತಾರೆ. ಯಾರೂ ಮದುವೆ ಮಾಡತಕ್ಕ ಸಂದರ್ಭಗಳೂ ಇರುತ್ತವೆ. ಮತ್ತೆ ಕೆಲವರು ಯಾರೋ ತೀರಿ ಹೋಗಿದ್ದಾರೆಂದು ಕಾರ್ಯಗಳನ್ನು ಮಾಡುವುದಕ್ಕೆ ಸ್ವಲ್ಪ ಅನುಕೂಲ ಮಾಡಬೇಕು. ಬಡ ಕಂಟ್ರಾಕ್ಟರ್‌ಗಳಿಗೆ 10 ಪರ್ಸೆಂಟ್ ರಿಯಾಯಿತಿಯನ್ನು ಕೊಡಬೇಕೆಂದು ನಾವು ನಿಯಮಾವಳಿಯಲ್ಲೇ ಅಳವಡಿಸಿಕೊಂಡಿದ್ದೇವೆ. ನಮ್ಮ ಕಛೇರಿಯಿಂದ ಇವತ್ತಿನವರೆಗೆ ಒಂದು ಎಲ್‌ಓಸಿ ಕೊಡಿ ಎಂದು ಫೋನ್ ಮಾಡಿಲ್ಲ. ಕಾರಣ ಏಕೆ ಅಂದರೆ ಆ ಶಿಸ್ತು ಇರಲಿ ಎಂದು ಮಾಡಿದ್ದೇವೆ. ಮಾನ್ಯ ರಾಮಸ್ವಾಮಿ ಅವರ ಬಗ್ಗೆ ನಮಗೆ ಸಂಶಯ ಇಲ್ಲ. ಆದ್ದರಿಂದ ಅವರು ವಿವರ ಕೊಡಬೇಕು. ಯಾವ ಸಬ್ ಡಿವಿಜನ್ ? ಯಾವ ಡಿವಿಜನ್ ? ಯಾವ ವರ್ಕ್ ? ಯಾವ ಕಂಟ್ರಾಕ್ಟರ್‌ಗಳ ಸೀನಿಯಾರಿಟಿ ಓವರ್ ಲುಕ್ ಮಾಡಿದ್ದಾರೆ ಎಂಬ ಮಾಹಿತಿ ಕೊಡಬೇಕು. ನಾಳೆ ಭಾನುವಾರ, ಆದರೂ ಸಹ ಆಫೀಸ್ ತೆಗೆಸಿ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡುತ್ತೇವೆ, ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅದು ಒಂದೇ ಅಲ್ಲ ಈಗಾಗಲೇ 10-12 ಜನರನ್ನು ಸಸ್ಪೆಂಡ್ ಮಾಡಿದ್ದೇವೆ. ಎಲ್‌ಓಸಿ ಇಶ್ಯೂ ಮಾಡುವಂತಹ ಸಂದರ್ಭದಲ್ಲಿ ಯಾರೂ ಕೂಡ ಸೀನಿಯಾರಿಟಿಯನ್ನು ಓವರ್ ಲುಕ್ ಮಾಡಕೂಡದು. ಅಲ್ಲಿ ಭ್ರಷ್ಟಾಚಾರ ಇದೆ, ಇಲ್ಲ ಎಂದು ನಾವು ಹೇಳುವುದಿಲ್ಲ. ಎಲ್‌ಓಸಿ ಹಂಚುವುದರಲ್ಲಿ ಭ್ರಷ್ಟಾಚಾರ ಇದೆ. ಆ ಸೀನಿಯಾರಿಟಿಯನ್ನು ಓವರ್‌ಲುಕ್ ಮಾಡಿ ಯಾರು ಕೊಡುತ್ತಾರೆ, ಅಧಿಕಾರಿಗಳ ಮೇಲೆ ನಾವು ಶೀಘ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ. ಮಾನ್ಯ ರಾಮಸ್ವಾಮಿಯವರು ವಿವರ ಕೊಡಲಿ. ಅವರ ಹತ್ತಿರ ವಿವರ ಇಲ್ಲ, ಇಂತಹ ಸಬ್‌ಡಿವಿಜನ್ ಎಂದು ಹೇಳಿದರೆ ಇಲ್ಲೇ ಗುರುತು ಹಾಕಿಕೊಂಡು ಅಧಿಕಾರಿಯನ್ನು ಕಳಿಸಿ ನಾನು ವಿವರವನ್ನು ತರಿಸಿಕೊಳ್ಳುತ್ತೇನೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, 10 ಪರ್ಸೆಂಟ್ ರಿಯಾಯಿತಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. 100 ಪರ್ಸೆಂಟ್ ರಿಯಾಯಿತಿ ಇದೆ. ಈಗೇನು ಸರ್ಕಾರದ ಪಾಲಿಸಿ ಇದೆ ಅದರ ಅನುಷ್ಠಾನ ಸರಿಯಾಗಿ ಆಗುತ್ತಿದೆಯೇ ಎಂದು ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಸರಿಯಾಗಿ ಸರ್ಕಾರದ ನಿಯಮಗಳು ಅನುಷ್ಠಾನ ಆಗುತ್ತಿದೆಯೇ ಎಂದು ಮಾನ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಆದರೆ ಮಂತ್ರಿಗಳೇ ಹೋಗಿ ಬೇಕು ಎಂದವರಿಗೆ ಚೀಟಿ ಕೊಟ್ಟು ಎಲ್‌ಓಸಿ ಇಶ್ಯೂ ಮಾಡುವುದಾದರೆ ಇಂತಹ ಸರ್ಕಾರ ಇರಬೇಕಾ ಹೇಳಿ? ಈಗ ನಮ್ಮ ಎಚ್‌ಆರ್‌ಬಿ, ಎಚ್‌ಆರ್‌ಸಿ ಡಿವಿಜನ್, ಡ್ಯಾಮ್ ಡಿವಿಜನ್ ಗೋರೂರ್ ಚೀಫ್ ಇಂಜಿನಿಯರಿಂಗ್ ಸಂಬಂಧಿಸಿ ದಂತಹ ಡಿವಿಜನ್‌ಗಳನ್ನು ತಾವು ನೋಡಿ.

ಶ್ರೀ ಕೆ. ಎಸ್. ನಾಗೇಗೌಡ : ಈಗ ತಾವು ಒಂದು ಮಾತು ಹೇಳಿದಿರಿ. ಕನಿಷ್ಠ ಆತ್ಮಗೌರವ ಇದ್ದರೆ, ಮಂತ್ರಿಯಾಗಿರಬೇಕು ಎಂದು ಕನಿಷ್ಠ ಗೌರವ ಇದ್ದರೆ ನೀವು ಕ್ರಮ ತೆಗೆದುಕೊಳ್ಳಬೇಕು. ಕರ್ತವ್ಯ ಲೋಪ ಆದರೆ ನೀವು ಇರಕೂಡದು ಎಂದು ಹೇಳಿದಿರಿ. ಇದು ತಾವು ನನಗೆ ಕೊಟ್ಟಿರತಕ್ಕ ಛಾಲೆಂಜ್. ನಾನು ಹೇಳುತ್ತೇನೆ ನಾಳೆ ಸೋಮವಾರ, ನಂತರ ಮಂಗಳವಾರ. ನಾನು ಈ ಕೂಡಲೇ

ಎಲ್‌ಓಸಿ ಸ್ಕಾಪ್ ಮಾಡಿ ಎಂದು ಟೆಲಿಗ್ರಾಂ ಕಳಿಸುತ್ತೇನೆ. ಮಾನ್ಯ ಚೀಫ್ ಇಂಜಿನಿಯರ್‌ಗೆ ಟೆಲಿಫೋನ್ ಮಾಡಿ ಎಲ್‌ಓಸಿ ಸ್ಕಾಪ್ ಮಾಡಿ ಎಂದು ಹೇಳುತ್ತೇನೆ, ಇದೊಂದು.

(ಮಾನ್ಯ ರಮೇಶ್ ಕುಮಾರ್ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಸೋಮವಾರ, ಮಂಗಳವಾರ ಮೂರು ದಿವಸ ನಮ್ಮ ಉನ್ನತ ಅಧಿಕಾರಿಯನ್ನು ಕಳಿಸಿ ತನಿಖೆ ಮಾಡಿಸುತ್ತೇನೆ. ನಾಲ್ಕನೆಯ ದಿವಸ ತಾವು ಹೇಳಿದ ಮಾತು ನಿಜವಾದರೆ ಸಸ್ಪೆಂಡ್ ಮಾಡುತ್ತೇನೆ. ತಾವು ಹೇಳಿದ ಮಾತು ನಿಜವಲ್ಲದಿದ್ದರೆ ನೀವು ರಾಜೀನಾಮೆ ಕೊಟ್ಟು ಹೋಗಬೇಕು, ನಾನು ಈ ಸದನಕ್ಕೆ ಬರಕೂಡದು.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಆ ಸವಾಲನ್ನು ಸ್ವೀಕಾರ ಮಾಡುತ್ತೇನೆ. ಅದರಲ್ಲಿ ಏನೂ ದೋಷ ಆಗಿಲ್ಲ ಎಂದರೆ, ನಾನು ಸುಳ್ಳು ಆಪಾದನೆ ಮಾಡಿದ್ದೇನೆಂದರೆ ನಾನು ರಾಜೀನಾಮೆ ಕೊಟ್ಟು ಹೋಗುತ್ತೇನೆ. ಎಚ್‌ಆರ್‌ವಿ ಡಿವಿಜನ್ ನೋಡಿ.

ಶ್ರೀ ಕೆ. ಎನ್. ನಾಗೇಗೌಡ : ನಾನು ನಿಮ್ಮನ್ನು ಕಳೆದ 20 ವರ್ಷದಿಂದ ಬಲ್ಲೆ. ನೀವು ಈ ರೀತಿ ಆಪಾದನೆ ಮಾಡುವವರು ಅಲ್ಲ. ನೀವು ಜವಾಬ್ದಾರಿಯಿಂದ ನಡೆದುಕೊಳ್ಳುವವರು. ನೀವು ಗಂಭೀರವಾಗಿ ನಡೆದುಕೊಳ್ಳುವಂತಹ ಶಾಸಕರು ಆಗಿರುವುದಕ್ಕೆ ನಾನು ಅಂತಹ ಕಟ್ಟುನಿಟ್ಟಾಗಿ ಹೇಳುತ್ತೇನೆ. ಸರ್ಕಾರ ಯಾರು ತಪ್ಪು ಮಾಡಿದ್ದಾರೆ, ಅವರನ್ನು ಮೂರು ದಿವಸದೊಳಗೆ ಪತ್ತೆ ಹಚ್ಚಿ ಸಸ್ಪೆಂಡ್ ಮಾಡುವುದು ಒಂದೇ ಅಲ್ಲ. ನಾನು ಶೀಘ್ರ ಕ್ರಮ ತೆಗೆದುಕೊಳ್ಳುತ್ತೇನೆ.

(ಏ) ಶಾಸಕರಿಗೆ ತಿಳಿಸದೆ ಕ್ಷೇತ್ರದಲ್ಲಿ ಸಭೆ ಸಮಾರಂಭ ನಡೆಸುವುದು

ಶ್ರೀ ಕೆ. ಎನ್. ಗದ್ದಿ : ಮಾನ್ಯ ಅಧ್ಯಕ್ಷರೆ, ಈಗ ಒಂದು ಆಮಂತ್ರಣ ಪತ್ರಿಕೆ ಇದೆ. ಮಾನ್ಯ ನಗರಾಭಿವೃದ್ಧಿ ಸಚಿವರಾದಂತಹ ಬಚ್ಚೇಗೌಡರು ಒಂದು ಯೋಜನೆಗೆ ಮಂಜೂರಾತಿ ನೀಡಿ ಆ ಕಾರ್ಯಕ್ರಮಕ್ಕೆ ಅಡಿಗಲ್ಲು ಹಾಕುತ್ತಿದ್ದಾರೆ ಮತ್ತು ಜಿಲ್ಲಾ ಮುಖ್ಯ ಸಚಿವರಾದಂತಹ ಎಸ್. ಎಸ್. ಪಾಟೀಲ್ ಅವರು ಸಹ ಈ ಸಮಾರಂಭದಲ್ಲಿ ಭಾಗವಹಿಸುತ್ತಿದ್ದಾರೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಅಲ್ಲಿಯ ಪುರಸಭೆಯ ಅಧ್ಯಕ್ಷರಿಗೆ ಕೊಟ್ಟಿದ್ದಾರೆ. ನಾನು ಶಾಸಕನಾಗಿ ಈ ಸ್ಕೀಮ್ ಸ್ಯಾಂಕ್ಷನ್ ಮಾಡಿಸುವ ಸಲುವಾಗಿ ಶತಪ್ರಯತ್ನ ಮಾಡಿದ್ದೇನೆ. ಈ ಕಾರ್ಯಕ್ರಮವನ್ನು ನನಗೆ ತಿಳಿಸದೇ ಹಮ್ಮಿಕೊಂಡಿರುವಂತಹ ನೀತಿಯನ್ನು ನಾನು ಸಂಪೂರ್ಣವಾಗಿ ಪ್ರತಿಭಟಿಸುತ್ತೇನೆ. ಇವತ್ತು ಈ ಕಾರ್ಯಕ್ರಮವನ್ನು ರದ್ದು ಮಾಡಬೇಕು. ಪುನಃ ನನ್ನ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಮಾಡಬೇಕು. ಪುರಸಭೆಯ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಮಾಡಿದ್ದಾರೆ. ನಾನು ಶಾಸಕನಾಗಿದ್ದೇನೆ. ನನಗೆ ತಿಳಿಸದೇ ಹೇಗೆ ಕಾರ್ಯಕ್ರಮ ಮಾಡಿದ್ದಾರೆ ? ದಯಮಾಡಿ ತಾವು ನಮ್ಮ ರಕ್ಷಣೆಗೆ ಬಂದು ಇದಕ್ಕೆ ಒಂದು ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು : ಮಾನ್ಯ ಎಸ್ ಎಸ್. ಪಾಟೀಲ್ ಅವರೇ ನಾನು ಆ ಇನ್‌ವಿಟೇಷನ್ ಅನ್ನು ನೋಡಿದೆ. ಅವರು ಮುನಿಸಿಪಾಲಿಟಿ ಕಾರ್ಯಕ್ರಮ ಎಂದು ನೆಪ ಒಡ್ಡಬಹುದು. ಆದರೆ ಕೆಯುಡಬ್ಲ್ಯುಎಸ್‌ಎಸ್‌ಬಿ ಕಾರ್ಯಕ್ರಮ ಆಗುತ್ತಿದೆ, ಸರ್ಕಾರ ಅದಕ್ಕೆ ಹಣ ಕೊಡುತ್ತಿದ್ದೀರಿ. ಶಾಸಕರದ್ದು ಕಡೆಯ ಹೆಸರಾಗಿ ಹಾಕುತ್ತಾರೆ. ಆ ತರಹ ಮಾಡಬಾರದು, ಅದು ಚೆನ್ನಾಗಿ ಕಾಣುವುದಿಲ್ಲ ಎಲ್ಲೋ ಒಂದು ಕಡೆಗೆ ಅದು